# <u>ನಾನು ಇನ್ನೂ ಬಹಳಷ್ಟು ಸಾಧಿಸಬೇಕಿದೆ</u>

**<u>ಕಾಲೂ ರಾಮ್ ಶರ್ಮ</u>**

ಸಾಮಾನ್ಯವಾಗಿ ಶಿಕ್ಷಕರ ಬಗ್ಗೆ ಮಾತು ಬಂದಾಗಲೆಲ್ಲ ಅವರ ಬಗ್ಗೆ ಪ್ರಕಟಗೊಳ್ಳುವ ಚಿತ್ರಣ, ಭಾವನೆ ನಿರಾಶಾಜನಕವೂ ನಕಾರಾತ್ಮಕವೂ ಆಗಿರುತ್ತದೆ. 'ಶಾಲೆಗಳಲ್ಲಿ ಶಿಕ್ಷಕರು ನಿಜಕ್ಕೂ ಪಾಠ ಮಾಡುತ್ತಾರೇನು, ಅವರು ಪಾಠಮಾಡುವಂತೆ ತೋರಿಸಿಕೊಳ್ಳುತ್ತಾರೆ ಅಷ್ಟೇ; ಶೈಕ್ಷಣಿಕ ವ್ಯವಸ್ಥೆಯೂ ಕೂಡ ಶಿಕ್ಷಕರನ್ನು ಅನುಮಾನದಿಂದಲೇ ನೋಡುತ್ತದೆ. ಆದರೆ ನನ್ನ ಅನುಭವಕ್ಕೆ ದಕ್ಕಿದ ಕಥೆಯೇ ಬೇರೆ. ಕಳೆದ ಎರಡು ವರ್ಷಗಳಲ್ಲಿ ನಾನು ಖರ್‌ಗೋನ್ ಜಿಲ್ಲೆಯ ಕೆಲವು ಶಾಲೆಗಳಿಗೆ ಭೇಟಿ ಕೊಡುತ್ತಿದ್ದೇನೆ. ಶಾಲೆಯಲ್ಲಿ ಶಿಕ್ಷಕರು ಯಾವ ಪರಿಸ್ಥಿತಿಯಲ್ಲಿ ಬೋಧನೆಯನ್ನು ಮಾಡುತ್ತಾರೆ ಎಂದು ಅರಿಯಲು ಪ್ರಯತ್ನಿಸುವುದೇ ನನ್ನ ಭೇಟಿಯ ಉದ್ದೇಶವಾಗಿತ್ತು. ಈಗ ಶಿಕ್ಷಕರ ಬಗೆಗೆ ಇರುವ ಪ್ರತಿಕೂಲ ಚಿತ್ರಣದಲ್ಲಿ ಏನಾದರೂ ಸತ್ಯಾಂಶ ಇದೆಯೇ ಎಂದು ಕಂಡುಕೊಳ್ಳುವ ಉದ್ದೇಶವೂ ಇತ್ತು.

ಈ ಲೇಖನವನ್ನು ಮುಂದುವರಿಸುವ ಮೊದಲು ಒಂದು ವಿಷಯವನ್ನು ಸ್ಪಷ್ಟ ಪಡಿಸುವುದು ಅಗತ್ಯ; ನಾನು ಭೇಟಿ ನೀಡಿದ ಶಾಲೆಯ ಯಾವ ಶಿಕ್ಷಕನೂ ನನಗೆ ಮೊದಲೇ ಪರಿಚಯ ಇರಲಿಲ್ಲ; ಹಾಗೂ ಆ ಶಾಲೆಗಳ ಯಾವ ಮುಖ್ಯೋಪಾಧ್ಯಾಯನಿಗೂ ನನ್ನ ಭೇಟಿಯ ವಿಷಯ ಮೊದಲೇ ತಿಳಿದಿರಲಿಲ್ಲ.

ಸ್ವತಂತ್ರ ಭಾರತದಲ್ಲಿ ನೇಮಿಸಲಾದ ಹಲವಾರು ಆಯೋಗಗಳು ಹಾಗೂ ರೂಪಿಸಲಾದ ನೀತಿಗಳು ಮತ್ತು ಧೋರಣೆಗಳು ಶಿಕ್ಷಕರ ಶೈಕ್ಷಣಿಕ ಸುಧಾರಣೆಗೆ ಶಿಫಾರಸು ಮಾಡಿವೆ. ಇಷ್ಟೆಲ್ಲ ಆದರೂ ಶಿಕ್ಷಕರ ವೃತ್ತಿಪರ ತರಬೇತಿಗಾಗಿ ಮಾಡಿರುವ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ನಮ್ಮಿಂದ ಸಾಧ್ಯವಾಗಿಲ್ಲ. ಅಲ್ಲದೆ ಶಿಕ್ಷಕರ ಸಾಮಾಜಿಕ ಸ್ಥಾನ-ಮಾನಗಳೂ ಕ್ರಮೇಣ ಕುಸಿಯುತ್ತಿವೆ. ಹೀಗಿದ್ದರೂ ತಮ್ಮ ಬೋಧನಾ ವೃತ್ತಿಯನ್ನು ಪರಿಶ್ರಮ ಹಾಗೂ ಪರಿಣತಿಗಳಿಂದ ಮಾಡುವ ಶಿಕ್ಷಕರನ್ನೂ ನಾವು ಕಾಣುತ್ತೇವೆ. ಸರಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಸ್ಥಿತಿಯನ್ನು ಬದಲಾಯಿಸುವುದು ಸಾಧ್ಯ ಎಂಬ ಆಸೆ-ಭರವಸೆಗಳನ್ನು ಇಂತಹ ಶಿಕ್ಷಕರು ನಮಗೆ ನೀಡುತ್ತಾರೆ. ಅವರು ಇದಕ್ಕೆ ಬದ್ಧರಾಗಿರುವಂತೆಯೂ ಕಾಣಿಸುತ್ತಾರೆ.

ಆ ಕೆಲವು ಶಾಲೆಗಳಲ್ಲಿ ನಡೆದಿರುವ ಕೆಲಸಗಳ ಸಂಕ್ಷಿಪ್ತ ಮಾಹಿತಿ ಇಲ್ಲಿ ಇದೆ:

ಖರ್‌ಗೋನ್ ಜಿಲ್ಲೆಯ ಆದಿವಾಸಿ ಶಾಲೆಯನ್ನು ನಾನು ತಲಪಿದಾಗ ಅಲ್ಲಿ ಶಿಕ್ಷಕಿಯನ್ನು ಸುತ್ತುವರಿದಿದ್ದ ಮಕ್ಕಳು ಕಥೆಗಳನ್ನು ಓದುವುದರಲ್ಲಿ ತಲ್ಲೀನರಾಗಿದ್ದರು. ಅವರೆಲ್ಲ 3 ಹಾಗೂ 4ನೇ ತರಗತಿಯ ಮಕ್ಕಳು. ಅವರೆಲ್ಲ ಸಮೀಪದ ಫಾಳ್ಯ ಎಂಬ ಬೆಟ್ಟದ ತಪ್ಪಲಿನ ಹಳ್ಳಿಯ ಮಕ್ಕಳು. ಆ ಶಿಕ್ಷಕಿಯಲ್ಲಿ ಅಗಾಧವಾದ ಉತ್ಸಾಹವಿತ್ತು. ನಾವು ಅಪರಿಚಿತರಾದರೂ ನಮ್ಮ ಇರವು ಆಕೆಯನ್ನು ಒಂದಿಷ್ಟೂ ವಿಚಲಿತಗೊಳಿಸಲಿಲ್ಲ. ಆಕೆ ಮಕ್ಕಳೊಂದಿಗಿನ ತನ್ನ ಕೆಲಸದಲ್ಲಿ ಸಂಪೂರ್ಣ ಮುಳುಗಿ ಹೋಗಿದ್ದಳು. ಆ ಮಕ್ಕಳು ತಮ್ಮ ಕಥಾ ವಾಚನದಲ್ಲಿ ತಮಗೆ ತಿಳಿಯದ ವಿಷಯ ಬಂದಾಗ ಶಿಕ್ಷಕಿಯ ಸಹಾಯ ಪಡೆಯುತ್ತಿದ್ದರು. ಆಕೆ ಅವರ ಸಹಾಯಕ್ಕೆ ಬರುತ್ತಿದ್ದಳು. ಶಿಕ್ಷಕಿಯೊಡನೆ ಕೇಳಲು ಅಸಮರ್ಥರಾದ ಅಥವಾ ಅಂಜಿಕೆಯಿರುವ ಮಕ್ಕಳ ಬಗ್ಗೆ ಅವಳ ಪ್ರತ್ಯೇಕ ಗಮನವಿತ್ತು. ಅಂಥವರ ಸಹಾಯಕ್ಕೆ ಅವಳು ಕೂಡಲೇ ಹೋಗುತ್ತಿದ್ದಳು.

ನಾವು ಸುಮಾರು ಒಂದು ತಾಸು ಆ ತರಗತಿಯಲ್ಲಿ ಇದ್ದೆವು. ಪಾಠ ಮುಗಿದಾಗ ನಾವು ಶಿಕ್ಷಕಿಯೊಡನೆ ಮಾತನಾಡಿದೆವು. ಮಕ್ಕಳಿಗೆ ಓದಲು ಕಲಿಸುತ್ತಿರುವುದಾಗಿ ಆಕೆ ಹೇಳಿದಳು. ಅದಕ್ಕಾಗಿ ಮಕ್ಕಳು ಪುಸ್ತಕವನ್ನು ಹಿಡಿದು ಓದಬೇಕಿತ್ತು. ಆಕೆ ಮಕ್ಕಳಿಗೆ ಓದಲು ಕತೆ ಪುಸ್ತಕಗಳನ್ನು ಕೊಟ್ಟಿದ್ದಳು. ಅವಳೇ ಕಂಡುಕೊಂಡ ಈ ಬೋಧನಾ ಕ್ರಮದ ಬಗ್ಗೆ ನನಗೆ ಆಶ್ಚರ್ಯದೊಂದಿಗೆ ಸಂತೋಷವೂ ಆಯಿತು. ಹೆಚ್ಚಿನ ಶಾಲೆಗಳಲ್ಲಿ ಓದಲು ಕಲಿಯುವುದು ಇಂಗ್ಲಿಷ್‌ನ ಅಕ್ಷರಮಾಲೆ ಹಾಗೂ ಹಿಂದಿಯ ಬಾರಾಖಡಿ (ದೇವನಾಗರಿಯಲ್ಲಿ ೧೨ ವರ್ಣಾಕ್ಷರಗಳು)ಅಭ್ಯಾಸ ಮಾಡುವುದರಿಂದ. ಅಕ್ಷರಮಾಲೆ ಕಲಿಯದೆ ಓದಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದಾಗ ಶಿಕ್ಷಕಿ ಮರು ಪ್ರಶ್ನೆಯ ಮೂಲಕವೇ ಉತ್ತರ ಕೊಟ್ಟಳು: ''ಮಕ್ಕಳು ಪುಸ್ತಕ ಓದುವುದನ್ನು ಅಕ್ಷರ ಮಾಲೆಯಿಂದ ಹೇಗೆ ಕಲಿಯಲು ಸಾಧ್ಯ?''

ಈ ಮಾತು ನನ್ನನ್ನೂ ಚಿಂತನೆಗೆ ಹಚ್ಚಿತು. ನಾವು ಓದುತ್ತಾ ಹೋಗುವಾಗ ಶಬ್ದಗಳ ಅರ್ಥವನ್ನು ತಿಳಿಯುತ್ತಾ ಹೋಗುತ್ತೇವೆ. ಒಂದು ಮಗುವಿನ ತೊದಲಿನಲ್ಲಿಯೂ ಅರ್ಥವಿದೆ. ಪ್ರಾಥಮಿಕ ಶಾಲೆಯಲ್ಲಿ ವರ್ಣಮಾಲೆ ಅಥವಾ ಬಾರಾಖಡಿ ಉರು ಹೊಡೆಯುವ ಹಳೆಯ ಪದ್ಧತಿಗೆ ಅರ್ಥವಿಲ್ಲ. ಭಾಷೆಯ ಕುರಿತು ಹೇಳುವುದಿದ್ದರೆ ಮಕ್ಕಳಲ್ಲಿ ಮಾತನಾಡುವ ಶಕ್ತಿ ಅಂತರ್ಗತವಾಗಿರುತ್ತದೆ ಎಂದು ನಮಗೆಲ್ಲ ಗೊತ್ತಿದೆ.

ಆ ಶಿಕ್ಷಕಿ ಮಕ್ಕಳೊಂದಿಗೆ ಆಗಾಗ್ಗೆ ಮಾತನಾಡುತ್ತಿದ್ದಳು. ಮಕ್ಕಳೂ ತಮ್ಮೊಳಗೆ ತಮ್ಮದೇ ವಿಧಾನದಲ್ಲಿ ಮಾತನಾಡಿಕೊಳ್ಳುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಳು. ಭಾಷೆಯ ಕಲಿಕೆಯಲ್ಲಿ ಬರೆಯುವುದು, ಓದುವುದರ ಹಾಗೆಯೇ ಮಾತುಕತೆಯೂ ಬಹು ಮುಖ್ಯ ಭಾಗ; ಯಾಕೆಂದರೆ

ಯೋಚನೆಗಳನ್ನು ಅಭಿವ್ಯಕ್ತಗೊಳಿಸಲು ಸಂಭಾಷಣೆಯೂ ಒಂದು ಶಕ್ತಿಯುತವಾದ ಸಾಧನವಾಗಿದೆ; ಈ ದೃಷ್ಟಿಯಿಂದ ಪ್ರಾಥಮಿಕ ಶಾಲೆಯ ತರಗತಿಗಳಲ್ಲಿ ಇದಕ್ಕೆ ಸಾಕಷ್ಟು ಅವಕಾಶ ಕೊಡುವುದು ಅಗತ್ಯ.

ಆ ಶಾಲೆಗೆ ನಾನು ಮತ್ತೆ ಮತ್ತೆ ಭೇಟಿ ಕೊಟ್ಟೆ. ಒಮ್ಮೆ ನಾನು ಅಲ್ಲಿಗೆ ಹೋದಾಗ ಬೆಳಗ್ಗೆ 10 ಗಂಟೆ ಆಗಿತ್ತು. ಶಿಕ್ಷಕಿಯರು ಆಗಲೇ ಬಂದಿದ್ದರು; ಆದರೆ ಮಕ್ಕಳ ಸಂಖ್ಯೆ ತೀರಾ ಕಡಿಮೆಯಿತ್ತು. ಇಬ್ಬರು ಶಿಕ್ಷಕರು ಮಾತನಾಡಿಕೊಂಡು ಒಂದು ಮೋಟರ್ ಸೈಕಲ್‌ನಲ್ಲಿ ಹೊರಡಲು ಅನುವಾದರು. ಎಲ್ಲಿಗೆ ಹೋಗುತ್ತಿದ್ದೀರಿ ಎಂದು ವಿಚಾರಿಸಿದಾಗ ಅವರು ನಮಗೂ ಬರುವಂತೆ ಆಹ್ವಾನಿಸಿದರು. ಸಮೀಪದ ಬೆಟ್ಟದ ತಪ್ಪಲಿನ ಗ್ರಾಮವಾದ ಫಾಳ್ಯಕ್ಕೆ ಅವರು ಹೋಗುತ್ತಿದ್ದರು. ಹೆಚ್ಚಿನ ಮಕ್ಕಳೂ ಅಲ್ಲಿಂದ ಬರುವವರೇ ಆಗಿದ್ದರು. ಮೋಟರ್ ಸೈಕಲನ್ನು ಒಂದೆಡೆ ನಿಲ್ಲಿಸಿ ಶಿಕ್ಷಕಿಯರು ಮನೆಯಿಂದ ಮನೆಗೆ ತೆರಳಿ ಮಕ್ಕಳನ್ನು ಶಾಲೆಗೆ ಬರುವಂತೆ ಮನವೊಲಿಸಿದರು. ಪೋಷಕರನ್ನೂ ಮಾತನಾಡಿಸಿ ಮಕ್ಕಳನ್ನು ಶಾಲೆಗೆ ಕಳಿಸುವಂತೆ ಕೇಳಿಕೊಂಡರು. ಸಾಮಾನ್ಯವಾಗಿ ಶಾಲೆ ತಪ್ಪಿಸಿಕೊಳ್ಳುವ ಮಕ್ಕಳ ಮನೆಗೆ ತಪ್ಪದೆ ಹೋಗಿ ಅವರ ಪೋಷಕರೊಡನೆ ಮಾತನಾಡಿದರು.

ಶಿಕ್ಷಕಿಯರ ಪ್ರಯತ್ನದ ಫಲವಾಗಿ ಮಕ್ಕಳು ಚೀಲ ಎತ್ತಿಕೊಂಡು ಶಾಲೆಗೆ ಹೊರಟವು. ಮಕ್ಕಳು ಮುಂದೆ ನಡೆಯುತ್ತ ಹೋದರೆ ಶಿಕ್ಷಕಿಯರು ಹಿಂದಿನಿಂದ ಮೋಟರ್ ಸೈಕಲಿನಲ್ಲಿ ಹಿಂಬಾಲಿಸಿದರು. ತಾವು ಪ್ರತಿವಾರವೂ ಹೀಗೆ ಆ ಗ್ರಾಮಕ್ಕೆ ಒಂದೆರಡು ಬಾರಿ ಹೋಗುವುದಾಗಿ ಶಿಕ್ಷಕರು ಹೇಳಿದರು.

ಶಾಲೆಗೆ ಮಕ್ಕಳನ್ನು ಕರೆತರುವ ಈ ಪರಿಶ್ರಮ ಸರಿಯಾದುದೇ ಆಗಿದೆಯೆಂದು ನಾನು ಕಂಡುಕೊಂಡೆ. ಮಕ್ಕಳು ಸರಿಯಾಗಿ ಬಾರದೆ ಇರುವ ಶಾಲೆಗಳಿಗೆ ಇದರಲ್ಲಿ ಒಂದು ಪಾಠವಿದೆ ಎಂದು ನನ್ನ ಭಾವನೆ. ಇದನ್ನು 'ಮನೆಗಳಿಗೆ ಹೋಗಿ ಮಕ್ಕಳನ್ನು ಕರೆತನ್ನಿ' ಎಂಬ ಶಿಕ್ಷಣ ಇಲಾಖೆಯ ಯಾವ ಆದೇಶವೂ ಇಲ್ಲದೆ ಶಾಲೆಯ ಶಿಕ್ಷಕರೇ ಸ್ವಯಂಪ್ರೇರಣೆಯಿಂದ ಮಾಡುತ್ತಿರುವುದು ಗಮನಾರ್ಹ.

ಇನ್ನೊಂದು ಶಾಲೆಗೆ ಭೇಟಿ ಕೊಡುವ ಅವಕಾಶವೂ ನನಗೆ ದೊರೆಯಿತು. ಒಂದು ಶಾಲೆಯಲ್ಲಿ ಮಗುವೇ ಕೇಂದ್ರ ಬಿಂದುವಾಗಿದೆ. ಆದರೆ ಶಾಲೆಯ ಗುಣಮಟ್ಟವನ್ನು ಕಾಪಾಡುವುದು ಶಿಕ್ಷಕನ ಕಾರ್ಯವಾಗಿರುತ್ತದೆ. ಒಂದು ಶಾಲೆಯ ಚಿತ್ರಣವನ್ನೇ ಬದಲಾಯಿಸಿದ ಒಬ್ಬ ಶಿಕ್ಷಕನನ್ನು ಭೇಟಿಯಾಗುವ ಅವಕಾಶ ನನಗೆ ಸಿಕ್ಕಿತು. ಆತ ಆ ಶಾಲೆಯನ್ನು ಹಾಗೂ ಆವರಣವನ್ನು ಎಷ್ಟು ಚೆಂದವಾಗಿ ಇಟ್ಟುಕೊಂಡಿದ್ದಾನೆಂದರೆ ಅದನ್ನು ನೋಡಿದರೆ ಸರಕಾರಿ ಶಾಲೆ ಎಂದು ನಂಬುವುದಕ್ಕೇ ಅಸಾಧ್ಯವಾಗುವಂತೆ ಇದೆ. ಶಾಲೆಯ ಆವರಣದಲ್ಲಿ ಹೂವಿನ ಗಿಡಗಳು, ಅವುಗಳಿಗೆ ನೀರುಣಿಸಲು ದಾರಿ, ಜಾಗ ಇರುವಲ್ಲೆಲ್ಲ ಹಸಿರು ರಾಚುವ ಹುಲ್ಲಿನ ಹಾಸು, ಮಕ್ಕಳಿಗೆ ಆಟವಾಡಲು ಪ್ರತ್ಯೇಕ ಜಾಗ–ಇವಿಷ್ಟೇ ಅಲ್ಲದೆ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಇಷ್ಟನ್ನೂ ಅವರು ಮಾಡಿದ್ದಾರೆ. ಹಿಂದೆ ಶಾಲೆಯ ಆವರಣದಲ್ಲಿ ಕಾಡು ಬೆಳೆದಿತ್ತು. ಅದನ್ನು ತೆಗೆಯುವುದೇ ದೊಡ್ಡ ಕೆಲಸವಾಯಿತು ಎಂದು ಬೇರೆ ಶಿಕ್ಷಕರು ನನಗೆ ಹೇಳಿದರು. ಈ ಶಿಕ್ಷಕ ಶಾಲೆಯ ನಿವೇಶನವನ್ನು ಅಂದಗೊಳಿಸಲು ಹಗಲಿರುಳು ದುಡಿದು ಅಲ್ಲಿ ಹಸಿರು ಚೆಲ್ಲಾಡುವಂತೆ ಮಾಡಿದರು. ಅಲ್ಲದೆ ಅವರು ಒಂದು ಪ್ರಯೋಗಾಲಯವನ್ನೂ ಸ್ಥಾಪಿಸಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಯ ಮಕ್ಕಳು ವಿಜ್ಞಾನಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಲು ಸೌಲಭ್ಯ ಮಾಡಿಕೊಟ್ಟರು. ಅವರು ಪರ್ಯಾಯ ಬೋಧನೆ–ಕಲಿಕೆ ಸಾಮಗ್ರಿಗಳನ್ನೂ ಪತ್ರಿಕೆಗಳನ್ನೂ ಸಂಗ್ರಹಿಸಿ ವಿದ್ಯಾರ್ಥಿನಿಯರಿಗೆ ಓದಲು ಕೊಡುತ್ತಿದ್ದರು.

ಶಾಲೆಯನ್ನು ಉತ್ತಮಗೊಳಿಸುವ ದಿಕ್ಕಿನಲ್ಲಿ ಶಿಕ್ಷಕರು ನಿರಂತರವಾಗಿ ಕೆಲಸ ಮಾಡುತ್ತಿರುತ್ತಾರೆ. ಸರಕಾರಿ ಶಾಲೆಯ ಪರಿಸ್ಥಿತಿಯನ್ನು ಸುಧಾರಿಸುವುದು ಅಸಾಧ್ಯ ಎಂಬ ನಂಬಿಕೆಯನ್ನು ಹುಸಿಗೊಳಿಸುವಂತೆ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಕನು ಮನಸ್ಸು ಮಾಡಿದರೆ ಶಿಕ್ಷಣಕ್ಕೆ ಸಂಬಂಧಿಸಿದ ಯಾವ ಕಾರ್ಯವೂ ಅಸಾಧ್ಯವಲ್ಲ ಎಂದು ಅವರು ನಂಬುತ್ತಾರೆ.

---

ಕೆ.ಆರ್.ಶರ್ಮ ಅವರು ಮಧ್ಯಪ್ರದೇಶದ ಖರ್‌ಗೋನ್‌ನಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಹಿಂದೆ ಹೊಶಂಗಾಬಾದ್‌ನ ಏಕಲವ್ಯದಲ್ಲಿ 20 ವರ್ಷ ಕೆಲಸ ಮಾಡಿದ್ದಾರೆ. ಅವರು ಫೌಂಡೇಶನ್‌ನ ಪ್ರಕಟಣೆಯಾದ 'ಶಿಕ್ಷಾ ಕಿ ಬುನಿಯಾದ್' ವಾರ್ತಾಪತ್ರದ ಸಂಪಾದಕ ವರ್ಗದಲ್ಲಿ ಇದ್ದರು. ಅವರು ಶಿಕ್ಷಣ ಹಾಗೂ ಸಾಮಾಜಿಕ ವಿಷಯಗಳ ಕುರಿತು ಬರೆಯುತ್ತಾರಲ್ಲದೆ ಎನ್‌ಸಿಇಆರ್‌ಟಿ ಹಾಗೂ ಎನ್‌ಬಿಟಿ ಕುರಿತು ಪುಸ್ತಕ ಬರೆದಿದ್ದಾರೆ. ಅವರನ್ನು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದು.

Kr.sharma@azimpremjifoundation.org